ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 4/12/19

ಕಾಂಗ್ರೆಸ್, ಡಿಎಂಕೆ ಸಭಾತ್ಯಾಗ | ಭದ್ರತೆ ಪ್ರತಿಷ್ಠೆಯ ಸಂಗತಿಯಲ್ಲ ಎಂದ ಅಮಿತ್ ಶಾ

# ಎಸ್‌ಪಿಜಿ ತಿದ್ದುಪಡಿಗೆ ಸಂಸತ್ ಸಮ್ಮತಿ

**ಹೊಸದಿಲ್ಲಿ:** ಭಾರಿ ಗದ್ದಲ ಹಾಗೂ ಕಾಂಗ್ರೆಸ್, ಡಿಎಂಕೆ ಸದಸ್ಯರ ಸಭಾತ್ಯಾಗದ ನಡುವೆ ವಿಶೇಷ ಭದ್ರತಾ ಪಡೆ (ಎಸ್‌ಪಿಜಿ) ತಿದ್ದುಪಡಿ ವಿಧೇಯಕ ಮಂಗಳವಾರ ರಾಜ್ಯಸಭೆಯಲ್ಲಿ ಅಂಗೀಕಾರಗೊಂಡಿದೆ.

ಮಾಜಿ ಪ್ರಧಾನಿ ಹಾಗೂ ಅವರ ಕುಟುಂಬಸ್ಥರಿಗೆ ಹುದ್ದೆಯಿಂದ ಕೆಳಗಿಳಿದ ಐದು ವರ್ಷದವರೆಗಷ್ಟೇ ಎಸ್‌ಪಿಜಿ ಭದ್ರತೆ ಒದಗಿಸುವ ವಿಧೇಯಕ ಅಂಗೀಕಾರಗೊಳ್ಳುವ ಮುನ್ನ ರಾಜ್ಯಸಭೆಯಲ್ಲಿ ಭಾರಿ ಗದ್ದಲದ ವಾತಾವರಣ ಏರ್ಪಟ್ಟಿತ್ತು. ಅದರ ನಡುವೆಯೂ ವಿಧೇಯಕ ಮಂಡಿಸಿದ ಗೃಹ ಸಚಿವ ಅಮಿತ್ ಶಾ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಕುಟುಂಬ ಸದಸ್ಯರಿಗೆ ನೀಡಲಾಗಿದ್ದ ಎಸ್‌ಪಿಜಿ ಭದ್ರತೆ ಹಿಂಪಡೆದಿರುವುದರ ಹಿಂದೆ ಯಾವುದೇ ರಾಜಕೀಯ ದ್ವೇಷದ ಕ್ರಮವಿಲ್ಲ. ರಾಷ್ಟ್ರೀಯ ಹಿತಾಸಕ್ತಿಯಿಂದ ಕಾಯಿದೆಯಲ್ಲಿನ ಮೂಲ ಅಂಶಗಳನ್ನು ಪುನಃ ಸ್ಥಾಪಿಸಲಾಗಿದೆ ಅಷ್ಟೇ. ಅಷ್ಟಕ್ಕೂ ಗಾಂಧಿ ಕುಟುಂಬ ಗುರಿಯಾಗಿಸಿಕೊಂಡು ಎಸ್‌ಪಿಜಿ ಕಾಯಿದೆಯಲ್ಲಿ ಬದಲಾವಣೆ ತರಲಾಗಿಲ್ಲ. ಹಿಂದೆ ಎಸ್‌ಪಿಜಿಯಲ್ಲಿ ಕಾರ್ಯನಿರ್ವಹಿಸಿದ್ದ ಸಿಆರ್‌ಪಿಎಫ್‌ನ ನುರಿತ ಯೋಧರಷ್ಟೇ ಗಾಂಧಿ ಕುಟುಂಬದ ಭದ್ರತೆಗೆ ನಿಯೋಜಿಸಲಾಗಿದೆ ಎಂದು ತಿರುಗೇಟು ನೀಡಿದರು.

"ಎಸ್‌ಪಿಜಿ ಭದ್ರತೆ ಯಾವುದೋ ಒಂದು ಕುಟುಂಬದ ಪ್ರತಿಷ್ಠೆಯ ಸಂಕೇತವಾಗುವುದನ್ನು ನಾವು ಸರ್ವಥಾ ಒಪ್ಪುವುದಿಲ್ಲ. 130 ಕೋಟಿ ಜನರ ಭದ್ರತೆ ಸರಕಾರದ ಜವಾಬ್ದಾರಿಯಾಗಿದೆ," ಎಂದು ಕಾಂಗ್ರೆಸ್ ಸದಸ್ಯರ ಆರೋಪಗಳಿಗೆ ತಿರುಗೇಟು ನೀಡಿದರು.



## ಅಧಿಕಾರಿಗಳ ಅಮಾನತು, ತನಿಖೆಗೆ ಆದೇಶ

ಕೆಲ ದಿನಗಳ ಹಿಂದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ದಿಲ್ಲಿ ನಿವಾಸದಲ್ಲಿ ಭದ್ರತಾ ಲೋಪವಾಗಿದ್ದ ಘಟನೆಗೆ ಸಂಬಂಧಿಸಿದಂತೆ ಮೂವರು ಸಿಆರ್‌ಪಿಎಫ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದ್ದು, ಈ ಸಂಬಂಧ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ ಎಂದೂ ಅಮಿತ್ ಶಾ ಸದನಕ್ಕೆ ಮಾಹಿತಿ ನೀಡಿದರು. ಅಲ್ಲದೇ ಪ್ರಿಯಾಂಕಾ ಅವರ ಮನೆಗೆ ಅವರ ಸಹೋದರ ರಾಹುಲ್ ಗಾಂಧಿ ಕಪ್ಪು ವರ್ಣದ ಟಾಟಾ ಸಫಾರಿ ಎಸ್‌ಯುವಿನಲ್ಲಿ ಬರುತ್ತಾರೆಂದು ಭದ್ರತಾ ಅಧಿಕಾರಿಗಳಿಗೆ ಮಾಹಿತಿ ಇತ್ತು. ಆದರೆ ಮೀರತ್‌ನಿಂದ ಕಾಂಗ್ರೆಸ್ ಕಾರ್ಯಕರ್ತರ ಗುಂಪೊಂದು ಅಂತಹದ್ದೇ ವಾಹನದಲ್ಲಿ ಆಗಮಿಸಿದ್ದರಿಂದ ಅಧಿಕಾರಿಗಳು [illegible] ಇದಕ್ಕೂ ಮುನ್ನ ಲೋಕಸಭೆಯಲ್ಲಿ ಇದೇ ವಿಚಾರವಾಗಿ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದರು.

ಮಾಜಿ ಪ್ರಧಾನಿಗಳಾದ ಪಿ.ವಿ. ನರಸಿಂಹ ರಾವ್, ಐ.ಕೆ. ಗುಜ್ರಾಲ್, ಚಂದ್ರಶೇಖರ್, ಎಚ್.ಡಿ. ದೇವೇಗೌಡ, ಮನಮೋಹನ್ ಸಿಂಗ್ ಅವರಿಗೆ ನೀಡಲಾಗಿದ್ದ ಎಸ್‌ಪಿಜಿ ಭದ್ರತೆಯ ಪುನರ್‌ಪರಿಶೀಲನೆ ವೇಳೆ ಸದನದಲ್ಲಿ ಯಾವ ಚರ್ಚೆಗಳೂ ಆಗಿರಲಿಲ್ಲ ಎಂದರು.

ಕೆಲವು ದಿನಗಳ ಹಿಂದಷ್ಟೆ ಕೇಂದ್ರ ಸರಕಾರ ರಾಜೀವ್ ಗಾಂಧಿ ಅವರ ಕುಟುಂಬ ಸದಸ್ಯರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ನೀಡಲಾಗಿದ್ದ ಎಸ್‌ಪಿಜಿ ಭದ್ರತೆಯನ್ನು ಹಿಂಪಡೆದು ಝಡ್ ಪ್ಲಸ್ ರಕ್ಷಣೆ ಒದಗಿಸಲು ಕ್ರಮ ಕೈಗೊಂಡಿತ್ತು. ಗಾಂಧಿ ಕುಟುಂಬವನ್ನು ಗುರಿಯಾಗಿಸಿಕೊಂಡು ರಾಜಕೀಯ ಮಾಡಲಾಗುತ್ತಿದೆ ಎಂದು ಕಾಂಗ್ರೆಸ್ ಸದಸ್ಯರು ಟೀಕಿಸಿದ್ದರು. ಎಸ್‌ಪಿಜಿ ಭದ್ರತೆ ಪಡೆದವರಿಗೆ ಬ್ಲ್ಯಾಕ್ ಕಮಾಂಡೊಗಳು, ಹೈಟೆಕ್ ಗುಂಡು ನಿರೋಧಕ ವಾಹನಗಳು, ಜಾಮರ್‌ಗಳು, ಬೆಂಗಾವಲು ವಾಹನಗಳು ಹಾಗೂ ಆ್ಯಂಬುಲೆನ್ಸ್ ಸೌಲಭ್ಯ ಇರುತ್ತವೆ.

ಇದಕ್ಕೂ ಮೊದಲು ನ. 27ರಂದು ಲೋಕಸಭೆಯಲ್ಲಿ ವಿಧೇಯಕ ಪಾಸಾಗಿತ್ತು. ಇದರೊಂದಿಗೆ ಸಂಸತ್ತಿನ ಮುದ್ರೆ ಬಿದ್ದಂತಾಗಿದೆ.

### ಹಾಲಿ ನಿಯಮವೇನು?

- ಪ್ರಧಾನಿ ಮತ್ತು ಅವರ ಅಧಿಕೃತ ನಿವಾಸದಲ್ಲಿರುವ ಹತ್ತಿರದ ಕುಟುಂಬ ಸದಸ್ಯರಿಗೆ ಎಸ್‌ಪಿಜಿ ರಕ್ಷಣೆ
- ಮಾಜಿ ಪ್ರಧಾನಿಗಳು, ಅವರಿಗೆ ಹಂಚಿಕೆ ಮಾಡಲಾದ ನಿವಾಸದಲ್ಲಿ ತಂಗುವ ಕುಟುಂಬಸ್ಥರಿಗೂ ಭದ್ರತೆ

### ಏನು ಬದಲಾಗಲಿದೆ?

- ಪ್ರಧಾನಿಯವರ ಎಸ್‌ಪಿಜಿ ಭದ್ರತೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ
- ಮಾಜಿ ಪ್ರಧಾನಿ ಹಾಗೂ ಅವರ ಕುಟುಂಬ ಸದಸ್ಯರಿಗೆ ಮಾಜಿಯಾದ ನಂತರದ 5 ವರ್ಷಗಳ ಅವಧಿವರೆಗೆ ಮಾತ್ರ ಎಸ್ಪಿಜಿ ಭದ್ರತೆ

8